**ಕರ್ನಾಟಕ ಸರ್ಕಾರ**
**(ಕೃಷಿ ಇಲಾಖೆ)**

**ಸಂಖ್ಯೆ**: ಉಕೃನಿ/ಸಾಕೃಘ/ಸಾ.ಸಿರಿ/ಸುತ್ತೋಲೆ-5/2022-23

ಕೃಷಿ ಆಯುಕ್ತಾಲಯ.
ಶೇಷಾದ್ರಿ ರಸ್ತೆ, ಬೆಂಗಳೂರು
ದಿನಾಂಕ:07.05.2022

**ಸಾವಯವ ಸಿರಿ ಸುತ್ತೋಲೆ-5**

**ಇವರಿಗೆ,**

**ಎಲ್ಲಾ ಜಿಲ್ಲಾ ಜಂಟಿ ಕೃಷಿ ನಿರ್ದೇಶಕರು**

**ವಿಷಯ:** 2022-23ನೇ ಸಾಲಿನ "ಸಾವಯವ ಸಿರಿ" ಯೋಜನೆಯಡಿ ಜಿಲ್ಲೆಗಳಲ್ಲಿ ಸಾವಯವ ಕೃಷಿಯಲ್ಲಿ ಸಾಮಾರ್ಥ್ಯಾಭಿವೃದ್ಧಿ ಚಟುವಟಿಕೆಗಳಡಿ ತರಬೇತಿಗಳನ್ನು ಆಯೋಜಿಸುವ ಕುರಿತು.

**ಉಲ್ಲೇಖ:**. ಈ ಕಛೇರಿ ಸುತ್ತೋಲೆ-4 ದಿನಾಂಕ:27.04.2022

****

ಮೇಲಿನ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ. 2021-22ನೇ ಸಾಲಿನ "ಸಾವಯವ ಸಿರಿ" ಯೋಜನೆಯಡಿ ಪ್ರಸಕ್ತ ಸಾಲಿನಲ್ಲಿ ಆಯ್ದ 200 ರೈತರಿಗೆ ಒಂದು ದಿನದ 2 ತರಬೇತಿಗಳನ್ನು ಆಯೋಜಿಸಲು ಉಲ್ಲೇಖದನ್ವಯ ತಿಳಿಸಲಾಗಿದೆ.

ಸುತ್ತೋಲೆ-4 ರಲ್ಲಿ ನೀಡಿರುವ ತರಬೇತಿ ವಿಷಯಗಳು ವಿಸ್ತಾರವಾಗಿದ್ದು, ಒಂದು ದಿನದ ತರಬೇತಿಯಲ್ಲಿ ಎಲ್ಲಾ ಅಂಶಗಳನ್ನು ಅಳವಡಿಸಿಕೊಳ್ಳಲು ಸಮಯದ ಅಭಾವವಾಗುವುದರಿಂದ ತರಬೇತಿಗೆ ಒದಗಿಸಿರುವ ಅನುದಾನವನ್ನು ಬಳಸಿಕೊಂಡು ಒಂದು ದಿನದ ಬದಲಿಗೆ ಎರಡು ದಿನಗಳ 2 ತರಬೇತಿಯನ್ನು ಒಂದು ತಿಂಗಳ ಅಂತರದಲ್ಲಿ ಆಯೋಜಿಸಲು ಕಾರ್ಯಕ್ರಮ ರೂಪಿಸಲು ತಿಳಿಸಿದೆ. ಉಳಿದಂತೆ ಸುತ್ತೋಲೆ -4ರಲ್ಲಿ ನೀಡಿರುವ ಮಾರ್ಗಸೂಚಿಯನ್ವಯ ತರಬೇತಿಯಲ್ಲಿ ಕನಿಷ್ಠ ಶೇ.75ರಷ್ಟು ಯುವಕ ಮತ್ತು ಮಹಿಳಾ ರೈತರು ಭಾಗವಹಿಸುವಂತೆ ಒತ್ತು ನೀಡಲು ತಿಳಿಸಲಾಗಿದ್ದು ಈ ಸಂಬಂಧ ತರಬೇತಿ ಆಯೋಜನೆ ಕುರಿತಂತೆ ಕಡ್ಡಾಯವಾಗಿ ಸ್ಥಳೀಯ ದಿನಪತ್ರಿಕೆಗಳಲ್ಲಿ ಪ್ರಕಟಣೆ ನೀಡಿ ಅರ್ಹ ಆಸಕ್ತ ರೈತರು ತರಬೇತಿಯ ಪ್ರಯೋಜನ ಪಡೆದುಕೊಳ್ಳುವಂತೆ ಕ್ರಮ ವಹಿಸುವುದು.

**ಅಪರ ಕೃಷಿ ನಿರ್ದೇಶಕರು**
**(ಸಾವಯವ ಕೃಷಿ)**